<u>ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.</u>

ಸಿ.ಸಿ.ನಂ. 3268/2023

ಸಿ.ಡಬ್ಲ್ಯೂ -01

ಪಿ.ಡಬ್ಲ್ಯೂ-01

ಸಾಕ್ಷಿದಾರನ ಹೆಸರುಃ- ಸಿ.ಎಸ್. ಗಂಗಾಧರಯ್ಯ

ತಂದೆಯ ಹೆಸರು ಲೇಟ್ ಸಿ.ಎನ್. ಸಿದ್ದಯ್ಯ

ವಯಸ್ಸು 64 ವರ್ಷ

ಉದ್ಯೋಗ ವ್ಯವಸಾಯ

ವಾಸ ಚಿಕ್ಕಮಾವತೂರು

**<u>ಸಾಕ್ಷಿಗೆ ದಿಃ 09.12.2024 ರಂದು ಪ್ರಮಾಣ ವಚನ ಬೋಧಿಸಲಾಯಿತು</u>.**

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>**

ಚಾಸಾ 2 ನನಗೆ ಗೊತ್ತು. ಆರೋಪಿ ನನಗೆ ಗೊತ್ತು. ದಿಃ 08.08.2023 ರಂದು ಬೆಳಿಗ್ಗೆ 9 ಗಂಟೆಯ ಸಮಯದಲ್ಲಿ ನಾನು ಸಿದ್ದಯ್ಯನಕೆರೆಪಾಳ್ಯದ ಜಮೀನ ಹತ್ತಿರ ಹೋಗುತ್ತಿದ್ದಾಗ ನೀವು ದಾರಿ ಬಿಡದೇ ಇದ್ದರೆ ನಾವು ಟ್ರಾಕ್ಟರ್ ತೆಗೆದುಕೊಂಡು ಜಮೀನಿಗೆ ಉಳುಮೆ ಮಾಡಿಸಲು ಹೇಗೆ ಹೋಗುವುದು ಎಂದು ಕೇಳಿದ್ದಕ್ಕೆ ಆರೋಪಿ ನನಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು ಜೀವ ಬೆದರಿಕೆ ಹಾಕಿ ನನ್ನ ತಲೆಗೆ ಕೂಡಲಿನಿಂದ ಹಣೆಗೆ ಹೋಡೆದಿದ್ದು ಕಲ್ಲಿನಿಂದ ಬಲಪಕ್ಕಗೆ ಹೊಡೆದಿರುತ್ತಾನೆ. ನಂತರ ಸ್ಥಳಕ್ಕೆ ಚಾಸಾ 2 ಅವರು ಬಂದಿದ್ದು ಕೂಡಲನ್ನು ತೆಗೆದುಕೊಂಡು ಅಲ್ಲಿಯೇ ಇದ್ದ ತೊಟ್ಟಿಯಲ್ಲಿ ಹಾಕಿರುತ್ತಾರೆಂದು ಹೇಳುತ್ತಾರೆ. ನಿನ್ನನ್ನು ಕೊಲೆ ಮಾಡಿ ನಾನು 1 ವರ್ಷದಲ್ಲಿ ಜಾಮೀನು ಪಡೆದು ಬರುತ್ತೇನೆ ದುಡ್ಡಿನಿಂದ ಏನು ಬೇಕಾದರೂ ಆಗುತ್ತದೆಂದು ಹೇಳಿರುತ್ತಾನೆ. ನನ್ನ ಜಮೀನು ಸರ್ವೆ ನಂ 127/ಪಿ 10 ಆಗಿದ್ದು ನನ್ನ ಬಾಗಕ್ಕೆ 1 ಎಕರೆ 35 ಗುಂಟೆ ಬಂದಿರುತ್ತದೆ. ಸದರಿ ಜಮೀನು ಚಿಕ್ಕಮಾವತೂರುನಲ್ಲಿ ಇರುತ್ತದೆ. ನನ್ನ ಮತ್ತು ಆರೋಪಿ ನಡುವೆ ದಾರಿ ವಿಚಾರಕ್ಕೆ ಗಲಾಟೆ ಆಗಿರುತ್ತದೆ.

ನಂತರ ಪೊ. ಠಾಣೆಗೆ ದೂರನ್ನು ನೀಡಲು ಹೋಗಿದ್ದು ಪೋಲಿಸರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ದೂರು ನೀಡಲು ಹೇಳಿದು ಅದರಂತೆ ನಾನು ಚಿಕಿತ್ಸೆ ಪಡೆದು ನಂತರ ಬಂದು ದೂರನ್ನು ನೀಡಿರುತ್ತೇನೆ. ದೂರಿಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 1 ಎಂದು ಸಹಿ ನಿ.ಪಿ 1(ಎ) ಎಂದು ಗುರುತಿಸಲಾಯಿತು. ದಿಃ 09.08.2023 ರಂದು ಬೆಳಿಗ್ಗೆ 10 ರಿಂದ 11 ಗಂಟೆಯ ಸಮಯಕ್ಕೆ ಪೋಲಿಸರು ಸ್ಥಳಕ್ಕೆ ಬಂದಿದ್ದು ಆ ದಿನ ನನ್ನ ಜೊತೆ ಚಾಸಾ 3 ಮತ್ತು 4 ಸಹ ಇದ್ದರು. ಮಹಜರ ಮಾಡಿರುತ್ತಾರೆ. ಸ್ಥಳ ಪಂಚನಾಮೆಯನ್ನು ನಿ.ಪಿ 2 ಎಂದು ಸಹಿ ನಿ.ಪಿ 2(ಎ) ಎಂದು

ಗುರುತಿಸಲಾಯಿತು. ಪಂಚನಾಮೆಯ ಸಮಯದಲ್ಲಿ ನಕ್ಷೆಯನ್ನು ಸಹ ತಯಾರು ಮಾಡಿರುತ್ತಾರೆ ಅದಕ್ಕೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 3 ಎಂದು ಸಹಿಯನ್ನು ನಿ.ಪಿ 3(ಎ) ಎಂದು ಗುರುತಿಸಲಾಯಿತು. ಮು. ಮಾ. ಗಳನ್ನು ಗುರುತಿಸುತ್ತೇನೆ. ಅವುಗಳನ್ನು ಮು. ಮಾ 1 ಮತ್ತು 2 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ಗಲಾಟೆ ಆದ ದಿನ ಆರೋಪಿ ನನ್ನ ಮುಂಬಾಗದ ಹಣೆಗೆ, ಬಲ ಕಣ್ಣಿನ ಹುಬ್ಬಿನ ಮೇಲೆ ಮತ್ತು ಮೂಗಿನ ಮೇಲೆ ಹೊಡೆದು ಗಾಯ ಮಾಡಿರುತ್ತಾರೆಂದರೆ ಸರಿ. ಪೊ. ಠಾಣೆಗೆ ದೂರನ್ನು ನೀಡಿದಲ್ಲಿ ನಿನ್ನನ್ನು ಕತ್ತರಿಸುತ್ತೇನೆಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಸ್ಥಳದಲ್ಲಿ ಪೋಲಿಸರು ಕಲ್ಲು ಮತ್ತು ಕೂಡಲುನ್ನು ಜಪ್ತು ಮಾಡಿಕೊಂಡಿರುತ್ತಾರೆ.

**<u>ಆರೋಪಿ ಪರ ಪಾಟೀ ಸವಾಲುಃ ಟಿ.ಎಂ.ಎಸ್, ವಕೀಲರಿಂದಃ</u>**

ನಾನು ಬಿ.ಬಿ.ಎಂ. ಮಾರ್ಕೇಟಿಂಗ್ ಪಿಜಿ ಡಿಪ್ಲೊಮಾ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತಿದ್ದೇನೆ. ನಾನು ಚಿಕ್ಕಮಾವತೂರಿನಲ್ಲಿ ವಾಸ ಮಾಡುತ್ತಿದ್ದೇನೆ. ಈಗಲೂ ಸಹ ಅಲ್ಲಿಯೇ ಇದ್ದೇನೆ. ನನಗೆ ಸೇರಿದ 6-7 ಎಕರೆ ಜಮೀನು ಇರುತ್ತದೆ. ನಾವು ಮತುತ ಆರೋಪಿತರ ಕುಟುಂಬದವರು ಭಾಗ ಮಾಡಿಕೊಂಡಿರುತ್ತೇವೆ. ಯಾವ ರೀತಿ ಭಾಗ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿ ಪಾರಿಕತ್ತ ಮೂಲಕ ಮಾಡಿಕೊಂಡಿದ್ದಾರೆಂದು ಹೇಳುತ್ತಾರೆ. ಸರ್ವೆ ನಂ 127/ಪಿ10 ಜಮೀನು ಪಾರಿಕತ್ತ ಮೂಲಕ ಬಂದಿರುತ್ತದೆ ಅದು ಪಿತ್ರಾರ್ಜಿತ ಸ್ವತ್ತು ಆಗಿರುತ್ತದೆ. ಪಾರಿಕತ್ತನಲ್ಲಿರಸ್ತೆಯ ಬಗ್ಗೆ ಬರೆಯಲಾಗಿದೆ ಎಂದರೆ ಸಾಕ್ಷಿ ನನ್ನ ತಂದೆ ತಾತನ ಕಾಲದಿಂದ ಸದರಿ ರಸ್ತೆಯನ್ನು ಉಪಯೋಗಿಸುತ್ತಿದ್ದು ಬರೆಯುವ ಅವಶ್ಯಕತೆ ಇಲ್ಲವೆಂದು ಹೇಳುತ್ತಾರೆ. ಸದರಿ ರಸ್ತೆಗೆ ಬಗ್ಗೆ ನಕಾಶೆ ರಸ್ತೆ ಮತ್ತು ಸರ್ಕಾರಿ ರಸ್ತೆ ನಮೂದು ಇದೆ ಎಂದರೆ ಸಾಕ್ಷಿ ನಕ್ಷೆ ಇಲ್ಲವೆಂದು ಹೇಳುತ್ತಾರೆ. 1 ಎಕರೆ 35 ಗುಂಟೆ ಜಮೀನು ಇರುವ ಬಗ್ಗೆ ಪೊಲಿಸರಿಗೆ ಪಹಣಿ ನೀಡಿರುತ್ತೇನೆ. ಪೋಲಿಸರು ಸ್ಥಳಕ್ಕೆ ಬಂದಾಗ ದಾರಿ ಎಲ್ಲಿಂದ ಎಲ್ಲಿಗೆ ಹೋಗುತ್ತದೆ ಯಾವ ಜಮೀನುಗಳ ಮೂಲಕ ಎಲ್ಲಿ ಹೋಗುತ್ತದೆಂದು ಪರಿಶೀಲನೆ ಮಾಡಿರುತ್ತಾರೆ. ನಾನು ದಾರಿಯನ್ನು ಪೋಲಿಸರಿಗೆ ತೋರಿಸಿರುತ್ತೇನೆ. ಪಿ.ಎಸ್.ಐ ಅವರುದಾರಿ ಮಾಡಿಸಿಕೊಟ್ಟಿರುತ್ತಾರೆ. ದೂರು ನೀಡಿದ ಬಳಿಕ ದಾರಿ ಮಾಡಿಸಿಕೊಟ್ಟಿರುತ್ತಾರೆ. ಪಿ.ಎಸ್.ಐ ಅವರ ಹೆಸರು ನನಗೆ ಮರೆತೆ ಹೋಗಿರುತ್ತದೆ. ದೂರು ನೀಡಿದ 2 ದಿನಗಳ ಬಳಿಕ ದಾರಿ ಮಾಡಿಸಿಕೊಟ್ಟಿರುತ್ತಾರೆ. ಯಾವುದರಿಂದ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ಜೆ.ಸಿ.ಬಿ ಯನ್ನು ನಾನು ತಂದಿದ್ದು ಅದರಿಂದ ಮಾಡಿಸಿಕೊಟ್ಟಿದ್ದಾರೆಂದು ಹೇಳುತ್ತಾರೆ.

ಗಲಾಟೆ ಆದ ದಿನ ನಾನು ಬಿಳಿ ಬಣ್ಣದ ಕಪ್ಪು ಚಕ್ಸ್ ಬಣ್ಣದ ಶರ್ಟ ಆಗಿರುತ್ತದೆ. ಪೋಲಸರು ಸದರಿ ಬಟ್ಟೆಯನ್ನು ನನಗೆ ಕೇಳಿರುವುದಿಲ್ಲ.ಸಾಕ್ಷಿ ಸ್ವ ಇಚ್ಚೆಯಿಂದ ನಾನು ಹಾಕಿದ ರಕ್ತ ಕಲೆ ಆದ ಬಟ್ಟೆಯ

ಮತ್ತು ಚಿಕಿತ್ಸೆ ಪಡೆದಿರುವ ಬ್ಯಾಂಡೇಜ್ ನ ಪೋಟೋ ಪಿ.ಎಸ್.ಐ ಅವರು ತೆಗೆದಿರುತ್ತಾರೆ. ಪೋಟೋವನ್ನು ಬೆಳಿಗ್ಗೆ 11 ಗಂಟೆಯ ಒಳಗೆ ತೆಗೆದಿರುತ್ತಾರೆ ಎಂದು ಹೇಳುತ್ತಾರೆ. ಪೊ. ಠಾಣೆಗೆ ನಾನು ಮತ್ತು ಚಾಸಾ 2 ಅವರು ಹೋಗಿರುತ್ತೇವೆ. ಗಲಾಟೆ ಆದ ದಿನವೇ ಅವರಿಗೆ ಕರೆದುಕೊಂಡು ಪೊ. ಠಾಣೆಗೆ ಹೋಗಿರುತ್ತೇನೆ. ಆ ದಿನ ಅವರ ಹೆಳಿಕೆ ಪಡೆದಿದ್ದರಾ ಎಂದರೆ ಸಾಕ್ಷಿ ಅವರ ಸಹಿ ಪಡೆದಿದ್ದಾರೆಂದು ಹೇಳುತ್ತಾರೆ ನಾನೇ ಎಲ್ಲಾ ಹೇಳಿದ್ದ ಎಂದು ಹೇಳುತ್ತಾರೆ. ಆ ದಿನ ನಾನು ಪೊ. ಠಾಣೆಗೆ ಚಾಸಾ 2 ಅವರನ್ನುಕರೆದುಕೊಂಡು ಹೋಗಿದ್ದನ್ನು ಬಿಟ್ಟು ಮತ್ತೆ ಹೋಗಿರುವುದಿಲ್ಲವೆಂದು ಹೇಳಿ ಸಾಕ್ಷಿ ರಸ್ತೆ ಮಾಡಿಸಲು ಕೇಳಲು ಹೋಗಿರುತ್ತೇವೆಂದು ಹೇಳುತ್ತಾರೆ. ಗಲಾಟೆ ಆಗಿದೆ ಎನ್ನುವ ಸ್ಥಳ ಸಾರ್ವಜನಿಕ ರಸ್ತೆ ಆಗಿರುತ್ತದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಕಾರ್, ಬೈಕ್ ಮತ್ತು ಲಾರಿ ಓಡಾಡುತ್ತೇವೆ ಎಂದರೆ ಸರಿ.

ಮಂಚೆಗೌಡರು ನನಗೆ ಗೊತ್ತು. ಅವರು ಕೆ.ಎಂ.ಎಫ್.ನ ಎಂ.ಡಿ ಆಗಿದ್ದರು. ಅವರು ನಿಮಗೆ ಕೆಲಸ ಕೊಡಿಸಿರುತ್ತಾರೆ ಎಂದರೆ ಸಾಕ್ಷಿ ಬಿಚನಹಳ್ಳಿಯ ಗಂಗಾಧರ ಅವರು ಕೊಡಿಸಿರುತ್ತಾರೆಂದು ಹೇಳುತ್ತಾರೆ. ಮಂಚೆಗೌಡ ಅವರು ಗಂಗಾದರ ಅವರ ಸಂಬಂಧಿ ಎಂದರೆ ಸರಿಯಲ್ಲ. ನಾನು ಕೋಲಾರ ಡೈರಿಯಲ್ಲಿ ಮಾತ್ರ ಕೆಲಸ ಮಾಡಿರುತ್ತೇನೆ. ನಾನು 2020 ರಲ್ಲಿ ನಿವೃತ್ತಿ ಹೊಂದಿರುತ್ತೇನೆ.

ಮು. ಮಾ. ಗಳಿಗೆ ಕವರ್ ಗಳನ್ನು ಎಲ್ಲಿ ಸುತ್ತಿದ್ದಾರೆ ಎಂದರೆ ಸಾಕ್ಷಿ ಮಹಜರ ಮಾಡಿದ ಜಾಗದಲ್ಲಿ ಸುತ್ತಿದ್ದಾರೆಂದು ಹೇಳುತ್ತಾರೆ. ಕಲ್ಲಿನ ತೂಕ ಕಾಲ ಕೆ.ಜಿ ಯಿಂದ ಅರ್ದ ಕೆ. ಜಿ ಬರಬಹುದು ಎಂದು ಹೇಳುತ್ತಾರೆ. ಕಲ್ಲನ್ನು 5 ಮೀಟರದಿಂದ ನನಗೆ ಎಸೆದಿರುತ್ತಾರೆ. ನನ್ನ ಬಲ ಪಕ್ಕಗೆ ಹೊಡೆದಿದ್ದು ನನಗೆ ನೋವಾಗಿರುತ್ತದೆ. ಮು. ಮಾ. ಗಳ ಕಲ್ಲಿನಿಂದ ಬಿಸಿ ಹೊಡೆದಲ್ಲಿ ಮೂಳೆ ಮುರಿತ ಉಂಟಾಗುತ್ತದೆ ಎಂದರೆ ಸರಿ. ಮು. ಮಾ. ಗಳನಂತರ ಕಲ್ಲು ಮತ್ತು ಕೂಡಲು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಚಾಸಾ 3 ಮತ್ತು 4 ಅವರನ್ನು ಯಾರು ಕರೆದಿರುತ್ತಾರೆ ಎಂದರೆ ಸಾಕ್ಷಿ ಅವರೇ ಸಹಿ ಹಾಕಿಸಿಕೊಂಡಿದ್ದಾರೆಂದು ಹೇಳುತ್ತಾರೆ.

ಚಾಸಾ 3 ಮತ್ತು 4 ಅವರ ಸಹಿಯನ್ನು ಮಹಜರಗೆ ಪಡೆದಿರುತ್ತಾರೆ. ಎಷ್ಟು ಸಹಿ ಪಡೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಮಹಜರಿಗೆ ನಾನು ಎಷ್ಟು ಸಹಿ ಮಾಡಿರುತ್ತೇನೆಂದು ನನಗೆ ನೆನಪಿಲ್ಲ. ಸಾಕ್ಷಿ ನಂತರ 2 - 3 ಕಡೆ ಸಹಿ ಮಾಡಿರಬಹುದು ಎಂದು ಹೇಳುತ್ತಾರೆ. ಬೆಳಿಗ್ಗೆ 11.30 ರ ಬಳಿಕ ಸಹಿಯನ್ನು ಪಡೆದ ನಂತರ ಎಷ್ಟು ಸಮಯದವರೆಗೆ ಇದ್ದರು ಎಂದರೆ ಸಾಕ್ಷಿ ಸಹಿ ಪಡೆದ ಬಳಿಕ ಹೋಗಿರುತ್ತಾರೆಂದು ಹೇಳುತ್ತಾರೆ. ನಾನು ಹು.ದುರ್ಗ ಸರ್ಕಾರಿ ಆಸ್ಪತ್ರಗೆ ಹೋದಾಗ 10 , 11, 12 ಗಂಟೆ ಆಗಿರಬಹುದು ಎಂದು ಹೇಳುತ್ತಾರೆ. ವೈದ್ಯರ ಹೆಸರು ನನಗೆ ಗೊತ್ತಿಲ್ಲ. ವೈದ್ಯರು ನನಗೆ ಚಿಕಿತ್ಸೆ ನೀಡಿ ಕಳುಹಿಸಿರುತ್ತಾರೆ. ಬೇರೆ ಏನು ಮಾಡಿರುವುದಿಲವೆಂದರೆ ಬ್ಯಾಂಡೇಜ್

ಮಾಡಿರುತ್ತಾರೆಂದುಹೇಳುತ್ತಾರೆ. ಇಂಟಿಮೇಷನ್ ನೀಡಿರುತ್ತಾರೆಂದು ಹೇಳುತ್ತಾರೆ. ಘಟನೆಯ ಬಗ್ಗೆ ವಿವರಣೆಯನ್ನು ಕೇಳಿ ಚಿಕಿತ್ಸೆ ಬಗ್ಗೆ ಬರೆದಿರುತ್ತಾರೆಂದು ಹೇಳುತ್ತಾರೆ. ವೈದ್ಯರು ನಿಖರವಾಗಿ ಅಪಘಾತವಾ, ಹಲ್ಲೆಯಾ ಅಥವಾ ಬಿದ್ದಿರುವುದಾ ಎಂದು ಕೇಳಿರುತ್ತಾರೆ. ಬೇರೆನೂ ಕೇಳಿರುವುದಿಲ್ಲ.

ನಮಗೂ ಆರೋಪಿಗೂ 1 ಆಸ್ತಿಯ ವಿಚಾರವಾಗಿ ಮೊದಲಿನಿಂದಲೂ ಮನಸ್ತಾಪ ಇರುತ್ತದೆ. ಆರೋಪಿ ನನ್ನ ಹಾಗೂ ಇತರ 3 ಜನರ ವಿರುದ್ದ ಎಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಅಂದಿನಿಂದ ನಾನು ಅವರನ್ನು ದ್ವೇಷ ಮಾಡುತ್ತೇನೆಂದರೆ ಸರಿಯಲ್ಲ. ನಾನು ಆರೋಪಿಯ ಜಮೀನಿನಲ್ಲಿ ರಸ್ತೆ ಬಿಡಿಸಿಕೊಳ್ಳಬೇಕೆಂಬ ಉದ್ದೇಶದಿಂದ ಯಾವುದೇ ಘಟನೆ ನಡೆಯುದಿದ್ದರೂ ಸಹ ಪೋಲಿಸರ ಜೊತೆ ಸೇರಿ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಯಾವುದೇ ಹಲ್ಲೆ ಆಗದಿದ್ದರೂ ಸಹ ಮು. ಮಾ. ಗಳನ್ನು ಈ ಕೇಸಗೋಸ್ಕರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದೆ ಇರುವ ಕಾರಣ ಯಾವುದೇ ಗಾಯಗಳು ಆಗಿರುವುದಿಲ್ಲ ನಾನು ವೈದ್ಯರ ಜೊತೆ ಸೇರಿ ಗಾಯದ ಪ್ರಮಾಣ ಪತ್ರ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ರಸ್ತೆಯನ್ನು ಪಡೆಯುವ ಉದ್ದೇಶದಿಂದಂ ಹು.ದುರ್ಗ ಪೋಲಿಸರ ಜೊತೆ ಸೇರಿ ಸುಳ್ಳು ಕೇಸನ್ನು ದಾಖಲು ಮಾಡಿದ್ದೇನೆಂದರೆ ಸರಿಯಲ್ಲ. ಮಂಚೆಗೌಡ ಅವರ ಪ್ರಭಾವ ಬೆಳಸಿ ಸುಳ್ಳು ಕೇಸನ್ನು ಆರೋಪಿಯ ವಿರುದ್ದ ದಾಖಲು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಮು. ಮಾ. ಗೂ ಆರೋಪಿಗೂ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲವೆಂದರೆ ಸರಿಯಲ್ಲ. ಪೋಲಿಸರು ಸ್ಥಳಕ್ಕೆ ಬೇಟಿ ನೀಡಿಲ್ಲ ಠಾಣೆಯಲ್ಲಿಯೆ ಕುಳಿತುಕೊಂಡು ಮಹಜರನ್ನು ಸೃಷ್ಟಿ ಮಾಡಿ ತನಿಖೆಯನ್ನು ಸಹ ಮಾಡದೇ ಅಂತಿಮ ವರದಿ ಸಲ್ಲಿಸಿದ್ದಾರೆಂದರೆ ಸರಿಯಲ್ಲ.

ದೂರನ್ನು ಪೊಲಿಸರೇ ಬರೆದುಕೊಂಡಿರುತ್ತಾರೆ ನಾನು ಓದಿ ಸಹಿ ಮಾಡಿರುತ್ತೇನೆಂದು ಹೇಳುತ್ತಾರೆ. ದೂರನ್ನು ನಮ್ಮ ಜೊತೆ ಇರುವವರು ಬರೆದಿದ್ದು ನಾನು ಓದಿ ಸಹಿ ಮಾಡಿರುತ್ತೇನೆ ಅವರ ಹೆಸರು ನನಗೆ ನೆನಪಿಲ್ಲವೆಂದು ಹೇಳುತ್ತಾರೆ. ನನಗೆ ದಾರಿ ಬಿಡಿಸಿಕೊಳ್ಳಲು ಯಾವ ರೀತಿಯ ದೂರು ಬರೆಯಬೇಕು ಆ ರೀತಿಯ ದೂರನ್ನು ಬರೆದುಕೊಂಡಿದ್ದು ನಾನು ಅದಕ್ಕೆ ಅನುಗುಣವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.